ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 5, March-April, 2024, Pp. 53-58.
©*IIMRD*, Mysuru

IIMRD JOURNALS
www.iimrd.com

# ನೊಂದ ಜನಗಳ ದೇವರು ಡಾ. ಬಿ.ಆರ್.ಅಂಬೇಡ್ಕರ್

**ಡಾ. ಮಂಜುನಾಥ. ಬ. ಪಾಟೀಲ**
[1]ಸಂಶೋಧನಾ ವಿದ್ಯಾರ್ಥಿ, ಗಾಂಧಿ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
[2]ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಸಾರಾಂಶ: (Abstract)**

*ಭಾರತ ದೇಶ ಕಂಡಂತಹ ಇಪ್ಪತ್ತನೇ ಶತಮಾನದ ಶ್ರೇಷ್ಠ ವೈಚಾರಿಕರು, ಸಂಶೋಧಕರು, ಸಂಘಟನಕಾರರು, ಕ್ರಾಂತಿಕಾರಿಗಳು ಮೇಲಾಗಿ ಮಹಾನ್ ಮಾನವತಾವಾದಿಗಳು, ದಲಿತರ ಬದುಕಿಗೆ ಬೆಳಕು ನೀಡಿದ ಕಾರಣಿಕ ಪುರುಷರು, ಸಂವಿಧಾನ ಶಿಲ್ಪಿ, ರಾಷ್ಟ್ರ ಮಹಾನಾಯಕ, ನೊಂದ ಜನಗಳ ದೇವರು ಡಾ. ಬಿ.ಆರ್.ಅಂಬೇಡ್ಕರರವರು. ಇವರು ಮೂಲಭೂತವಾಗಿ ಸಮಾಜಶಾಸ್ತ್ರಜ್ಞರು. ಸಮಾಜ ಸುಧಾರಣೆ ಕುರಿತಂತೆ ಗಂಭೀರ, ಆಳವಾದ ಚಿಂತನೆಗೈದು ತಮ್ಮ ವಿಚಾರಗಳನ್ನು ಹಲವಾರು ಲೇಖನಗಳಲ್ಲಿ, ಭಾಷಣಗಳಲ್ಲಿ, ಗ್ರಂಥಗಳಲ್ಲಿ ವ್ಯಕ್ತಪಡಿಸಿರುವರು. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪದ್ಧತಿ ಎಷ್ಟು ಅನಿಷ್ಟಕಾರಿ? ಅಮಾನವೀಯ ಮುಖ ಹೊಂದಿದೆ ಎಂಬುದನ್ನು ವೈಜ್ಞಾನಿಕವಾಗಿ ವಿವೇಚಿಸಿದರು.*

**ಮುಖ್ಯಪದಗಳು (Keywords):** ಭಾರತೀಯ ಸಮಾಜ, ಅಸ್ಪೃಶ್ಯತೆ, ಜಾತಿಪದ್ಧತಿ, ಡಾ.ಬಿ.ಆರ್.ಅಂಬೇಡ್ಕರ್, ಸಂವಿಧಾನ ರಚನಕಾರರು.

## ಪೀಠಿಕೆ

ಡಾ. ಬಿ.ಆರ್.ಅಂಬೇಡ್ಕರವರು 1891 ಏಪ್ರಿಲ್ 14 ರಂದು, ಮಧ್ಯಪ್ರದೇಶದ ಇಂದೂರ್ ಜಿಲ್ಲೆಗೆ ಸೇರಿದ **'**ಮಹು**'** ಎಂಬಲ್ಲಿ ರಾಮ್‌ಜಿ ಹಾಗೂ ಭೀಮಾಬಾಯಿಯವರ 14ನೇ ಮಗನಾಗಿ ಜನಿಸಿದರು. ತಂದೆ ರಾಮ್‌ಜಿ ಸಕ್ಪಾಲ್ ಸೇನೆಯಲ್ಲಿ ಸುಬೇದಾರ ಮೇಜರ್ ಆಗಿ ಸೇವೆಸಲ್ಲಿಸುತ್ತಿದ್ದರು. ರಾಮ್‌ಜಿಯವರು ಶಿಸ್ತಿನ ಜೀವನಕ್ಕೆ ಹೆಸರಾದವರು. ಮಗನಿಗೆ ಯೋಗ್ಯ ಸಂಸ್ಕಾರ ನೀಡಿದರು. ಹೀಗಾಗಿ ಅಂಬೇಡ್ಕರವರು ಆಕರ್ಷಕ ವ್ಯಕ್ತಿತ್ವ ಹೊಂದಿದ್ದರು.

ದಾಪೋಲಿಯ ಪ್ರಾಥಮಿಕ ಶಾಲೆಯಲ್ಲಿ ಆರಂಭಿಕ ಶಿಕ್ಷಣ ಕೈಗೊಂಡರು. ಶಾಲೆಯಲ್ಲಿ ಶಿಕ್ಷಕರಾದ ಅಂಬೇಡ್ಕರರು ತಮ್ಮ ಹೆಸರನ್ನೇ ಭೀಮರಾವ್‌ರವರಿಗೆ ಮನೆತನದ (ಅಡ್ಡ) ಹೆಸರನ್ನಾಗಿಟ್ಟರು. ಡಾ. ಬಾಬಾಸಾಹೇಬರು **"**ಅಂಬೇಡ್ಕರ**"** ಎಂದು ಮುಂದೆ ಲೋಕ ಪ್ರಸಿದ್ಧರಾದರು. ಮುಂಬೈ ಎಲ್ಫಿನ್‌ಸ್ಟನ್ ಪ್ರೌಢಶಾಲೆಗೆ ಸೇರಿ ಮೆಟ್ರಿಕ್ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದು ಪಾಸಾಗಿ ಓರ್ವ ಪ್ರತಿಭಾವಂತ ಬಾಲಕ ಎಂದು ಸಾಬೀತು ಮಾಡಿದರು. ದಲಿತ ಬಾಲಕನಾದ ಇವರನ್ನು ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದುದಕ್ಕೆ ಸನ್ಮಾನಿಸಲಾಯಿತು. ಈ ಸನ್ಮಾನ ಸಮಾರಂಭದಲ್ಲಿ ಮರಾಠಿ ಭಾಷಾ ಸಾಹಿತಿ ಕೆಳುಸ್ಕರ್ ಅವರು ತಾವೇ

*Please cite this article as:* ಮಂಜುನಾಥ. ಬ. ಪಾಟೀಲ. (2024). ನೊಂದ ಜನಗಳ ದೇವರು ಡಾ. ಬಿ.ಆರ್.ಅಂಬೇಡ್ಕರ್. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ,* 5(5). ಪು.ಸಂ. 53–58

ಬರೆದಿದ್ದ *'ಗೌತಮ ಬುದ್ಧ'* ಎಂಬ ಗ್ರಂಥವನ್ನು ಕಾಣಿಕೆಯಾಗಿ ನೀಡಿದರು. ಕ್ರಿ.ಶ. 1906 ರಲ್ಲಿ **'ರಮಾಬಾಯಿ'**ಯವರನ್ನು ಬಾಳ ಸಂಗಾತಿಯನ್ನಾಗಿ ಮಾಡಿಕೊಂಡರು. ಮುಂಬೈನಲ್ಲಿ ಬಿ.ಎ. ಪದವಿಯನ್ನು ಪಡೆದರು. ವಿದ್ಯಾರ್ಥಿ ಜೀವನದಲ್ಲೆ ಅಸ್ಪೃಶ್ಯತೆಯ ಕರಾಳ ಮುಖದ ಪರಿಚಯವಾಯಿತು. ದಲಿತರ ಬದುಕು ಎಂಥ ಕಷ್ಟಕರ ಎಂಬುದರ ವಾಸ್ತವಿಕ ಸತ್ಯ ಇವರಿಗೆ ಹೊಸ ಚಿಂತನೆಗೆ ದಾರಿ ಮಾಡಿತು.

ಕ್ರಿ.ಶ. 1913 ರಲ್ಲಿ ತಂದೆಯ ನಿಧನ ಡಾ. ಅಂಬೇಡ್ಕರರವರಿಗೆ ತೀವ್ರ ನೋವು, ನಿರಾಶೆ ತಂದಿತು. ನಂತರ ತಮ್ಮ ತಂದೆಯ ಆಸೆಯಂತೆ ಶಿಕ್ಷಣ ಮುಂದುವರೆಸಿದರು. ಕ್ರಿ.ಶ. 1915 ರಲ್ಲಿ ಕೋಲಂಬಿಯಾ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. 'ಭಾರತದಲ್ಲಿ ಜಾತಿಗಳು' ಕುರಿತು ಒಂದು ಪ್ರಬಂಧ ರಚಿಸಿ ವಿಚಾರ ಸಂಕಿರಣವೊಂದರಲ್ಲಿ ಮಂಡಿಸಿ ತಮ್ಮ ಜ್ಞಾನ ಪ್ರಭೆ ತೋರಿದ ಸಂಗತಿ ಸಣ್ಣದಲ್ಲ. 1947 ರಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯ ಇವರು ಬರೆದ ಪ್ರಬಂಧಕ್ಕಾಗಿ ಪಿಎಚ್.ಡಿ. ಪದವಿ ನೀಡಿ ಗೌರವಿಸಿತು. ಎಂ.ಎಸ್.ಸಿ. ಪದವಿಗಾಗಿ ಅರ್ಥಶಾಸ್ತ್ರ ಕುರಿತು ಪ್ರೌಢ ಪ್ರಬಂಧ ರಚಿಸಿದರು.

1920–1923 ರಲ್ಲಿ ಲಂಡನ್ ಮತ್ತು ಜರ್ಮನಿಯಲ್ಲಿ ಅಭ್ಯಾಸ ಮಾಡಿದರು. ಅಧ್ಯಯನದಲ್ಲಿ ನಿರತರಾದೊಡೆ ಜಗವನ್ನೇ ಮರೆಯುವ ಸ್ವಭಾವದವರು. ಡಾ. ಅಂಬೇಡ್ಕರ್ ಅಮೇರಿಕಾದಲ್ಲಿದ್ದಾಗ ಕರಿಯ ನಿಗ್ರೋಗಳಿಗೆ ಸ್ವಾತಂತ್ರ್ಯ ತಂದ ಸಂವಿಧಾನ ಹಾಗೂ ಅವರ 14ನೇ ತಿದ್ದುಪಡಿ, ನಿಗ್ರೋ ಜನಾಂಗದ ಉನ್ನತಿಗಾಗಿ ಶ್ರಮಿಸಿದ ಬುಕರ್ ವಾಷಿಂಗಟನ್‌ರ ಜೀವನದಿಂದ ತುಂಬಾ ಪ್ರಭಾವಿತರಾಗಿ ಉತ್ತೇಜಿತರಾದರು. ಭಾರತೀಯ ದಲಿತರ ಬದುಕಿಗೆ ಸಮಾನತೆ, ಗೌರವ, ಸ್ವಾಭಿಮಾನದ ಜೀವನ, ವಿದ್ಯಾ, ಬದುಕು ತಂದು ಕೊಡಲು ಪ್ರತಿಜ್ಞೆಗೈದರು. ಯೋಚನೆ, ಯೋಜನೆಯ ಮೂಲಕವೇ ಹೋರಾಟದ ಬಾಳನ್ನು ಸಾಗಿಸಲು ಅಂಬೇಡ್ಕರ ನಿರ್ಧರಿಸಿದರು. ದಲಿತರ ಕಣ್ಣೀರು, ಅನುಭವಿಸುತ್ತಿರುವ ನರಕಯಾತನೆಯ ಜೀವನದಿಂದ ಅವರನ್ನು ಮೇಲಕ್ಕೆತ್ತಲು ಅವರ ಹೃದಯ ಸಂಕಲ್ಪದ ವಜ್ರವಾಯಿತು. ದಲಿತರಿಗೆ ಮೊದಲು ಶಿಕ್ಷಣವನ್ನು ನೀಡಬೇಕು, ನಂತರ ಅವರ ಬದುಕು ಗಟ್ಟಿಗೊಳ್ಳಬೇಕು. ರಾಜಕೀಯವಾಗಿ ಸ್ಥಾನಮಾನ ದೊರೆಯಬೇಕು ಎಂಬುದು ಅಂಬೇಡ್ಕರರವರ ವಿಚಾರವಾಗಿತ್ತು. ರಾಜಕೀಯ, ಸಾಮಾಜಿಕ, ಧಾರ್ಮಿಕ ಪ್ರಗತಿ, ಅರಿವು, ವಿವೇಚನೆ ಮೂಡಿಸಲು ಹತ್ತು ಹಲವು ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು.

ಲೇಖಕರಾದ ಡಾ. ಮಾನೆ, ತಮ್ಮ ಕಿರು ಗ್ರಂಥದಲ್ಲಿ ಡಾ. ಅಂಬೇಡ್ಕರವರ ಜೀವನವನ್ನು ಮೂರು ವಿಧಗಳಾಗಿ ಅಭ್ಯಸಿಸುವುದು ಯೋಗ್ಯ ಎನ್ನುತ್ತಾರೆ ಅವುಗಳೆಂದರೆ,

**1) ಸಾಮಾಜಿಕ ಹೋರಾಟ**

1920 ರಲ್ಲಿ 'ಮೂಕನಾಯಕ' 'ಸಮತಾ' 'ಬಹಿಸ್ಕೃತ ಭಾರತ' ಎನ್ನುವ ಪತ್ರಿಕೆಗಳ ಮೂಲಕ ದಲಿತರ ನೋವಿನ ಬದುಕನ್ನು ಹಾಗೂ ತಮ್ಮ ತರ್ಕಪೂರ್ಣ ವಾದಗಳನ್ನು ಮಂಡಿಸಿದರು. ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುವು ಮಾಡಿಕೊಡಲು ವಸತಿನಿಲಯ, ಗ್ರಂಥಾಲಯಗಳನ್ನು ತೆರೆದರು. ಸಾರ್ವಜನಿಕ ಸ್ಥಳಗಳನ್ನು ಉಪಯೋಗಿಸುವ ಹಕ್ಕು ದಲಿತರಿಗೂ ಇದೆ. ನಾವು ಮಾನವರು ; ಪ್ರಾಣಿಗಳಲ್ಲ. ಮೇಲ್ವರ್ಗದವರ ಜೊತೆ ನಡೆಯುವ, ನುಡಿಯುವ, ಸಹಭೋಜನ ಮಾಡುವ, ತಲೆ ಎತ್ತಿ ಬದುಕುವ ಅಧಿಕಾರ, ಸ್ಥಾನಮಾನ ಹಂಚಿಕೊಳ್ಳುವ ಹಕ್ಕಿದೆ ಎಂದು ತೋರಲು ಡಾ. ಬಿ.ಆರ್.ಅಂಬೇಡ್ಕರ ಸಾಮಾಜಿಕ ಹೋರಾಟ ಕೈಗೊಂಡರು.

**2) ರಾಜಕೀಯ ಹೋರಾಟ**

ಸೈಮನ್ ಆಯೋಗ, ದುಂಡುಮೇಜಿನ ಪರಿಷತ್ತು, ಶಾಸನ ಸಭೆಯಲ್ಲಿ, ದಲಿತರ ಹಕ್ಕುಗಳ ಏಳಿಗೆಗೆ ಬೇಡಿಕೆ ಇಟ್ಟರು. ದಲಿತರಿಗಾಗಿ ಮತದಾನ ವ್ಯವಸ್ಥೆಗೆ ಪ್ರತಿಪಾದಿಸಿದರು ಹಾಗೂ ಯಶಸ್ವಿಯಾದರು. ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನ ವ್ಯವಸ್ಥೆ ಮಾಡಲಾಯಿತು. ಆದರೆ ಮಹಾತ್ಮಾ ಗಾಂಧೀಜಿಯವರು ಈ ವ್ಯವಸ್ಥೆಯನ್ನು ವಿರೋಧಿಸಿದರು. ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಕೈಗೊಂಡರು. ಇವರ ಜೀವ ಉಳಿಸುವ ಸಲುವಾಗಿ ಅಂಬೇಡ್ಕರ 'ಪೂನಾ ಒಪ್ಪಂದ' ಕ್ಕೆ ಸಹಿ ಹಾಕಿದರು. ಇದು ಕಔಔಓಂ ಕಂಅಖ ಎಂದು ಪ್ರಸಿದ್ಧಿಯಾಗಿದೆ. ಸ್ವತಂತ್ರ ಕಾರ್ಮಿಕ ಪಕ್ಷ ಹಾಗೂ ಭಾರತೀಯ ರಿಪಬ್ಲಿಕ್ ಪಕ್ಷ ಸ್ಥಾಪಿಸಿ ರಾಜಕೀಯವಾಗಿ ದಲಿತರನ್ನು ಮುಂದೆ ತರುವಲ್ಲಿ ಯಶಸ್ವಿಯಾದರು. ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ದಲಿತರ ಹಕ್ಕುಗಳನ್ನು ಸಂವಿಧಾನಾತ್ಮಕವಾಗಿ ಖಚಿತಪಡಿಸಲು ಶ್ರಮಿಸಿದರು. ಅಸ್ಪೃಶ್ಯತೆ ನಿಷೇದ ಕಾನೂನು ಜಾರಿಗೆ ತಂದರು. ಪ್ರಧಾನಿ ಜವಾಹರಲಾಲ್ ನೆಹರೂ ಸಚಿವ ಸಂಪುಟದಲ್ಲಿ ದೇಶದ ಪ್ರಥಮ ಕಾನೂನು ಸಚಿವರಾಗಿ ಹಲವಾರು ಪ್ರಗತಿಪರ ಕಾನೂನುಗಳನ್ನು ರೂಪಿಸಿದವರು. ವಿಶೇಷವಾಗಿ ಮಹಿಳೆಯರ ಸಮಾನತೆಗಾಗಿ ಕೆಲವು ಕಾನೂನು ರೂಪಿಸಿ ಜಾರಿಗೆ ತರುವಲ್ಲಿ ಯಶಸ್ವಿಯಾದರು.

**3) ಧಾರ್ಮಿಕ ಹೋರಾಟ**

ಹಿಂದೂ ಧರ್ಮದ ವರ್ಣವ್ಯವಸ್ಥೆಯ ಬಗ್ಗೆ ಅತ್ಯಂತ ಕಠೋರ ಭಾವನೆ ಹೊಂದಿ ಅದನ್ನು ತಿರಸ್ಕರಿಸಿದರು. ಸಮಾನತೆ, ನೈತಿಕತೆ, ಮಾನವೀಯ ಪ್ರೇಮಗಳ ಮೂಲ ಸೆಲೆಯಾದ ಬೌದ್ಧ ಧರ್ಮವನ್ನು ಲಕ್ಷಾಂತರ ಅನುಯಾಯಿಗಳೊಂದಿಗೆ 1956 ಅಕ್ಟೋಬರ 14 ರಂದು ನಾಗ್ಪುರ ಸಮಾವೇಶದಲ್ಲಿ ಬೌದ್ಧ ಧರ್ಮ ಸ್ವೀಕರಿಸಿದರು.

ಹೀಗೆ ಬದುಕಿನುದ್ದಕ್ಕೂ ಹೋರಾಟಕ್ಕೆ ಒಂದು ಚಿರನೂತನ ಸಾಕ್ಷಿಯಾದ ಅಂಬೇಡ್ಕರ್, ಆಧುನಿಕ ಭಾರತಕ್ಕೆ ಅನ್ವಯವಾಗುವಂತಹ ಸಂವಿಧಾನ ರಚಿಸಿದ್ದು ಒಂದು ಐತಿಹಾಸಿಕ ಸಂಗತಿ. ಮಹರ್ ಜನಾಂಗದ ಮಹಾನ ಹೋರಾಟಗಾರರಾದ, ಡಾ. ಅಂಬೇಡ್ಕರ್, ದಲಿತರ ಭಾಗಕ್ಕೆ 'ಸೂರ್ಯದೇವ'ನೇ ಹೌದು. ಇಂತಹ ಮಹಾತ್ಮರು ಕ್ರಿ.ಶ. 1956 ಡಿಸೆಂಬರ 6 ರಂದು ನಮ್ಮಿಂದ ದೂರವಾದರು.

**ಜಾತಿರಹಿತ ಸಮಾಜ ಕುರಿತು ಅವರ ವಿಚಾರಗಳು**

ಜಾತಿಪದ್ಧತಿಯನ್ನು ಅತ್ಯಂತ ತರ್ಕಬದ್ಧ ರೀತಿಯಿಂದ ಖಂಡಿಸುವ ಅಂಬೇಡ್ಕರ್ ಅವರು ಜಾತಿರಹಿತ ಸಮಾಜ ಕುರಿತು ತಮ್ಮ ವಿಚಾರಗಳನ್ನು ಕೃತಿಯಲ್ಲಿ ಮಂಡಿಸಿದ್ದಾರೆ. ಜಾತಿ ವ್ಯವಸ್ಥೆ ಎಷ್ಟೊಂದು ಆಘಾತಕಾರಿ ಎಂಬುದನ್ನು ವಿವರಿಸಿದ್ದಾರೆ. ಇವರ ಹೊಸ ಸಮಾಜ ಅಥವಾ ಜಾತಿ ರಹಿತ ಸಮಾಜದ ರಚನೆಯ ಆಧಾರ ತತ್ವಗಳೆಂದರೆ, 1) ಸ್ವಾತಂತ್ರ್ಯ 2) ಸಮಾನತೆ 3) ಸಹೋದರತೆಯಾಗಿದೆ. ಸಾವಿರಾರು ವರ್ಷಗಳ ಪ್ರಾಚೀನತೆ ಪಡೆದಿರುವ ಹಿಂದೂ ಧರ್ಮವು ಅಸಮಾನತೆಯ ಆಧಾರದ ಮೇಲೆ ನಿಂತಿದೆ. ಈ ಸಮಾಜದಲ್ಲಿ ಯಾವುದೇ ಚೈತನ್ಯಶೀಲತೆಯ ಕೊರತೆ ಇದೆ. ಹಿಂದೂ ಧರ್ಮ ಸಾರ್ವತ್ರಿಕವಾಗುವ ಅರ್ಹತೆ ಪಡೆದಿಲ್ಲ. ಈ ಧರ್ಮದಲ್ಲಿ ತಲಸ್ಪರ್ಶಿಯಾಗಿ ಬದಲಾವಣೆ ಬೇಕು ಎಂದು ಬಲವಾಗಿ ಅಂಬೇಡ್ಕರ ಪ್ರತಿಪಾದಿಸಿದರು.

ಜಾತಿರಹಿತ ಸಮಾಜದಲ್ಲಿ ಸ್ವಾತಂತ್ರ್ಯ ಮುಖ್ಯವಾದುದು. ವಿಶೇಷವಾಗಿ ವ್ಯಕ್ತಿಗಳಿಗೆ ಸಂಚಾರ ಸ್ವಾತಂತ್ರ್ಯ ಲಭ್ಯವಾಗಬೇಕು. ಒಂದು ಭಾಗದಲ್ಲಿಯ ಬೆಳವಣಿಗೆ ಇತರ ಭಾಗಗಳಿಗೆ ಹರಡಬೇಕು. ವ್ಯಕ್ತಿಗಳ ಮಧ್ಯ ಸಂಬಂಧ ಅರ್ಥಪೂರ್ಣವಾಗಬೇಕು. ವ್ಯಕ್ತಿತ್ವ ಬೆಳವಣಿಗೆಗೆ ಎಲ್ಲರಿಗೂ ಸಮಾನವಾದ ಅವಕಾಶಗಳು ಹಾಗೂ ಸಾಧನೆಗಳು ಲಭ್ಯವಾಗಬೇಕು. ಅಂದಾಗ ಮಾತ್ರ ಸ್ವಾತಂತ್ರ್ಯ ಎಂಬ ಪದಕ್ಕೆ ಅರ್ಥ ಬರುವುದು. ವ್ಯಕ್ತಿ ವ್ಯಕ್ತಿಗಳು ಪರಸ್ಪರ ಆದರದಿಂದ ಮಾತನಾಡಿದಾಗ, ಕಷ್ಟಸುಖದಲ್ಲಿ ಭಾಗಿಯಾಗುವ ಮನೋಧರ್ಮ ರೂಪಗೊಂಡರೆ ಅದುವೇ ಭಾತೃತ್ವ ಸೋದರತೆಯಾಗಿದೆ. ಅಂಬೇಡ್ಕರವರ ''Annihilation of caste' ಎಂಬ ಗ್ರಂಥದಲ್ಲಿ "ಒಳಜಾತಿಗಳ ನಿರ್ಮೂಲನೆ ಹಾಗೂ ಸಹಭೋಜನದಂತಹ ಕ್ರಮಗಳಿಂದ ಜಾತಿಯ ನಿರ್ಮೂಲನೆ ಅಸಾಧ್ಯ ಎಂದು ಹೇಳಿರುವರು. ಜಾತಿಪದ್ಧತಿಯನ್ನು ಹೊಡೆದು ಹಾಕಲು ಅಂತರ್ಜಾತಿ ಮದುವೆಗಳು ಒಂದು ಯೋಗ್ಯ ಮಾಧ್ಯಮವಾಗಿದೆ. ಮದುವೆಯ ಮಾರ್ಗದಿಂದ ಮಾತ್ರ ಇವನು ನನ್ನವನು ಎಂಬ ಭಾವನೆ ಬರುವುದು. ಜಾತಿ ವ್ಯವಸ್ಥೆಯ ಅನಿಷ್ಠತೆ ಕುರಿತು ಜನರಲ್ಲಿ ತಿಳುವಳಿಕೆ ಮೂಡಿದರೆ ಮಾತ್ರ ಸಾಮಾಜಿಕ ಜೀವನದಲ್ಲಿ ಬದಲಾವಣೆ ತರಲು ಸಾಧ್ಯವಿದೆ. ನೈಜ ಸಮಾಜಕ್ಕೆ ನಾಗರಿಕ ಸರಕಾರಕ್ಕೂ ಧರ್ಮ ಅಡಿಗಲ್ಲು. ಧರ್ಮದ ತತ್ವಗಳು ಮಾನವೀಯ ದೃಷ್ಟಿಕೋನ ಹೊಂದಿರಬೇಕು. ವ್ಯಕ್ತಿ ವ್ಯಕ್ತಿ ಮಧ್ಯ ತಾರತಮ್ಯಕ್ಕೆ ಅವಕಾಶ ಮಾಡಿ ಕೊಡದೆ ಧರ್ಮಗ್ರಂಥಗಳನ್ನು ಸರಕಾರ ರದ್ದು ಮಾಡಬೇಕು. ಸಮಾನತೆ ಸ್ವಾತಂತ್ರ್ಯ ಹಾಗೂ ಸಹೋದರತೆಯು ನಿಜಧರ್ಮದ ಆಧಾರಗಳು.

ಒಂದು ಧರ್ಮ ತಲೆ ಎತ್ತಿನಿಲ್ಲಲು ಆ ಸಮಾಜದಲ್ಲಿಯ ಶೋಷಿತ ಸಮುದಾಯ ವ್ಯಕ್ತಿಗೌರವ ಹೊಂದಲು ಅಗತ್ಯವಾದ ಪರಿಸರ ನಿರ್ಮಾಣವಾಗಬೇಕು. ಈ ಜನಾಂಗ ಆರ್ಥಿಕವಾಗಿ ಸ್ವಾವಲಂಬನೆ ಹೊಂದಲು ಅಗತ್ಯವಾದ ಪರಿಸರ ನಿರ್ಮಾಣವಾಗಬೇಕು. ರಾಜಕೀಯ ಹಕ್ಕುಗಳನ್ನು ಶೋಷಿತ ಸಮುದಾಯ ಅನುಭವಿಸಲು ಅಗತ್ಯವುಳ್ಳ ಕಾನೂನುಗಳನ್ನು ಜಾರಿಯಲ್ಲಿ ತರಬೇಕು.

800 ವರ್ಷಗಳ ಹಿಂದೆಯೇ ಕರ್ನಾಟಕದಲ್ಲಿ ಬಸವೇಶ್ವರರು ಜಾತಿ ಪದ್ಧತಿಯ ವಿನಾಶಕ್ಕೆ ಕಾಯಾ, ವಾಚಾ, ಮನಸಾ ಪ್ರಾಮಾಣಿಕ ಪ್ರಯತ್ನ ಮಾಡಿದರು. ಬಸವೇಶ್ವರರು ಹಾಗೂ ಅಂಬೇಡ್ಕರ ಅವರ ಚಿಂತನೆಯಲ್ಲಿ ಸಾಮ್ಯತೆಯನ್ನು ಕಾಣುವುದು ಒಂದು ವಿಶಿಷ್ಠ ಸಂಗತಿಯಾಗಿದೆ.

***"ವೇದಕ್ಕೆ ಒರೆಯಕಟ್ಟುವೆ***
***ಶಾಸ್ತ್ರಕ್ಕೆ ನಿಗಳನಿಕ್ಕುವೆ***
***ತರ್ಕದ ಬೆನ್ನ ಭಾರಗಿತ್ತುವೆ***
***ಆಗಮದ ಮೂಗ ಕೊಯ್ವೆ***
***ನೋಡಯ್ಯ ಮಹಾದಾನಿ ಕೂಡಲಸಂಗಮದೇವ***
***ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯ"***

ಎಂಬ ಬಸವೇಶ್ವರರ ಈ ವಚನವು ಎಷ್ಟು ದಿಟ್ಟತನದಿಂದ ಕೂಡಿದೆ. ಅಂಬೇಡ್ಕರ ಕೂಡ ಭಾಷೆ, ಮನೋಧರ್ಮದಿಂದ ಜಾತಿ ಪದ್ಧತಿಯನ್ನು ಕಟುವಾಗಿ ಖಂಡಿಸಿ ಹೊಸ ಸಮಾಜದ ನಿರ್ಮಾಣಕ್ಕೆ ಕರೆ ನೀಡಿರುವರು.

**ಅಸ್ಪೃಶ್ಯತೆಯ ಉಗಮ ಕುರಿತು ಡಾ. ಅಂಬೇಡ್ಕರ್ ರವರ ವಿಚಾರಗಳು**

ಡಾ. ಅಂಬೇಡ್ಕರವರು ಹಿಂದೂ ಧಾರ್ಮಿಕ ಗ್ರಂಥಗಳನ್ನು ಪರ್ಯಾಲೋಚಿಸಿ ಅಧ್ಯಯನಮಾಡಿ ಅಸ್ಪೃಶ್ಯತೆ ಉಗಮ, ಕುರಿತು ಒಂದು ಮಹತ್ವದ ಗ್ರಂಥ ಬರೆದರು. ಅದುವೇ ಅಸ್ಪೃಶ್ಯರು ಯಾರು ? (Who were the Untouchable?) (1964) ಈ ಗ್ರಂಥಗಳಲ್ಲಿ ಅಸ್ಪೃಶ್ಯರು ಯಾರು ಎಂಬುದನ್ನು ಅತ್ಯಂತ ವೈಜ್ಞಾನಿಕವಾಗಿ ವಿವೇಚಿಸಿದ್ದಾರೆ. ಐತಿಹಾಸಿಕ ಸಂಶೋಧನೆಯ ಮೂಲಕ ಹಲವಾರು ಸತ್ಯಗಳನ್ನು ಹೊರತಂದಿದ್ದಾರೆ. ಅವರ ಪ್ರಕಾರ

1. ವೇದಗಳ ಕಾಲ (ಕ್ರಿ.ಶ. 400) ದಲ್ಲಿ ಈ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಧರ್ಮಶಾಸ್ತ್ರಗಳ ಕಾಲದಲ್ಲಿಯೂ ಅಸ್ಪೃಶ್ಯತೆಯ ಬಗೆಗೆ ಉಲ್ಲೇಖಗಳಿಲ್ಲ.
2. ಬೌದ್ಧ ಧರ್ಮದ ಅನುಯಾಯಿಗಳ ಮಧ್ಯ ಕಲಹ, ಘರ್ಷಣೆ ಸಂಭವಿಸಿದ ನಂತರ ಒಂದು ಗುಂಪು ಮೂಲ ಸಮಾಜದಿಂದ ದೂರ ಉಳಿಯುವಂತೆ ಮಾಡಿತು. ಆ ಸಮುದಾಯದ ಬಹುಸಂಖ್ಯಾತ ಜನರು ಬೌದ್ಧಧರ್ಮ ಸ್ವೀಕರಿಸಿದರು. ಇದನ್ನು ಬ್ರಾಹ್ಮಣರು ವಿರೋಧಿಸಿದರು. ಬೌದ್ಧ ಧರ್ಮ ಸೇರಿದ ಗುಂಪನ್ನು ಅಸ್ಪೃಶ್ಯರು ಅಥವಾ ಶೂದ್ರರು ಎಂದು ಕರೆದು ಅವರನ್ನು ಮುಟ್ಟುವಂತಿಲ್ಲ.
3. ಸಮಾಜದಿಂದ ದೂರ ಉಳಿದ ಗುಂಪು ಗೋಮಾಂಸ ತಿನ್ನುತ್ತಿದ್ದರು. ಇದನ್ನು ತಿರಸ್ಕರಿಸಿದ ಬ್ರಾಹ್ಮಣರು ಸ್ವತಃ ತಾವೇ ಯಜ್ಞ, ಯಾಗಾದಿಗಳನ್ನು ನಿಲ್ಲಿಸಿ ಬಲಿ ಮುಂತಾದ ಆಚರಣೆಯನ್ನು ನಿಲ್ಲಿಸಿದರು. ಸಸ್ಯಾಹಾರಿಗಳಾಗಿ ಹಾಗೂ ಅಹಿಂಸೆಯ ಪ್ರತಿಪಾದಕರು ಆಗಿ ಪರಿವರ್ತನೆ ಹೊಂದಿದರು. ಗೋಹತ್ಯೆ ನಿಷೇಧ ಮಾಡುವ ತಂತ್ರ ಹೂಡಲಾಯಿತು. ಗೋಮಾಂಸ ತಿನ್ನುವವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಯಿತು.
4. ಪುರದ ಹೊರಗೆ ವಾಸಿಸುವವರು ಸಹ ಅಸ್ಪೃಶ್ಯರೆಂದು ಸಹ ಪರಿಗಣಿಸುವ ಸಂಪ್ರದಾಯವಿತ್ತು. ವ್ಯಕ್ತಿಗಳು ಕೈಗೊಳ್ಳುವ ಉದ್ಯೋಗದಿಂದ ಅಸ್ಪೃಶ್ಯತೆ ಹುಟ್ಟಿಲ್ಲ ಬದಲಾಗಿ ಊರ ಹೊರಗೆ ಜೀವಿಸುವ ವ್ಯಕ್ತಿಗಳು ಕಾಲಾಂತರದಲ್ಲಿ ಅಸ್ಪೃಶ್ಯರಾದರು.
5. ಮಾನವ ಸಮಾಜಜೀವಿ; ಸಾಮಾಜಿಕ ಜೀವನ ಕಾಲಾನುಕ್ರಮದಲ್ಲಿ ಬೆಳೆದು ಬಂದಿತು. ಈ ಸಾಮಾಜಿಕ ಜೀವನದ ಆರಂಭ ಕಾಲದಲ್ಲಿ ಅಸ್ಪೃಶ್ಯತೆ ಇರಲಿಲ್ಲ.
6. ಸಮಾಜದ ವಿವಿಧ ಗುಂಪುಗಳ ಮಧ್ಯ ವಿರಸ, ವೈರತ್ವ ಭಾವನೆ ತಲೆದೋರಿರಬಹುದು. ಒಂದು ಗುಂಪು ಇನ್ನೊಂದು ಗುಂಪಿನೊಡನೆ ಹೋರಾಟ ಮಾಡಿ ಸೋತಾಗ ಗ್ರಾಮದಿಂದ ದೂರ ಉಳಿಯುವ ಪ್ರಸಂಗ ತಲೆದೋರಿತು.
7. ದೂರ ಉಳಿದ ಗುಂಪು ಸಮಾಜದಿಂದ ಬೇರ್ಪಟ್ಟು ಬದುಕುವುದು ಅಸಾಧ್ಯವಾಯಿತು. ಬದುಕಿನ ಮಾರ್ಗ ಹುಡುಕಿತು, ಗ್ರಾಮ ರಕ್ಷಣೆಯ ಜವಾಬ್ದಾರಿ ಹೊತ್ತಿತ್ತು.
8. ತದನಂತರ ಊರ ಹೊರಗೆ ವಾಸಿಸುವುದು ಅನಿವಾರ್ಯವಾಯಿತು. ಈ ಅಲ್ಪಸಂಖ್ಯಾತ ಗುಂಪಿಗೆ ಸಾಮಾಜಿಕ ಜೀವನ ಗಗನ ಕುಸುಮವಾಯಿತು.

9. ಈ ಅಲ್ಪಸಂಖ್ಯಾತ ಗುಂಪನ್ನು ಪ್ರತ್ಯೇಕವಾಗಿ ಕಾಣುವ ಮನೋಭಾವ ಬೆಳೆಯಿತು. ಇವರು ಸ್ಪರ್ಶಕ್ಕೆ ಅಯೋಗ್ಯರೆಂದು ತಿಳಿಯಲಾಯಿತು.

ಹೀಗೆ ಅಸ್ಪೃಶ್ಯತೆಯು ಉಗಮಗೊಂಡಿತು ಎಂದು ಹೇಳುವ ಅಂಬೇಡ್ಕರ ಅಸ್ಪೃಶ್ಯತೆಯನ್ನು ಖಾಯಂ ಆಗಿ ಪೋಷಿಸಿಕೊಂಡು ಬರಲಾಯಿತು ಹಿಂದೂ ಸಮಾಜದಲ್ಲಿ ಇದನ್ನು ಅನುಸರಿಸಲಾಯಿತು.

**ಅಸ್ಪೃಶ್ಯತೆ ನಿವಾರಣೆ**

- ದಲಿತರು ಸುಸಂಸ್ಕೃತ ಜೀವನ ಪದ್ಧತಿ ರೂಢಿಸಿಕೊಳ್ಳಬೇಕು.
- ದಲಿತರು ಶಿಕ್ಷಣವಂತರಾಗಿ, ಉದ್ಯೋಗ ಹಿಡಿದು ಆರ್ಥಿಕ ಜೀವನವನ್ನು ಉನ್ನತೀಕರಣಗೊಳಿಸಿ ಕೊಳ್ಳಬೇಕು.
- ಅಸ್ಪೃಶ್ಯರು ಮಾನವರು ಉಳಿದವರಂತೆ ಅವರಿಗೆ ಬದುಕುವ ಹಕ್ಕಿದೆ ಎಂದು ಸವರ್ಣೀಯ ಹಿಂದೂಗಳು ತಿಳಿದು ಅಸ್ಪೃಶ್ಯರನ್ನು ಗೌರವದಿಂದ ಹಾಗೂ ಆದರದಿಂದ ಕಾಣಬೇಕು.
- ಅಸ್ಪೃಶ್ಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ರಾಜಕೀಯ ಅಧಿಕಾರ ಹಾಗೂ ಹುದ್ದೆಗಳನ್ನು ಪಡೆಯಬೇಕು.
- ಹಿಂದೂ ಸಮಾಜದ ಮೂಲಭೂತ ನಂಬಿಕೆಯಲ್ಲಿ ಬದಲಾವಣೆ ಅಗತ್ಯ ಹಿಂದೂಗಳ ಆತ್ಮಸಾಕ್ಷಿ ಬದಲಾಗಿ ದಲಿತರನ್ನು ಸಹೋದರರಂತೆ ಕಾಣುವ ದೃಷ್ಟಿಕೋನಬೇಕು.

ಹೀಗೆ ಡಾ. ಬಿ. ಆರ್. ಅಂಬೇಡ್ಕರವರು ದೇಶದ ಆಂತರಿಕ ಸಮಸ್ಯೆಗಳ ಬಗೆಗೆ ಹೆಚ್ಚು ಲಕ್ಷ್ಯವಹಿಸಿದರು. ವಿಶೇಷವಾಗಿ ಸಾಮಾಜಿಕ ಬೆಳವಣಿಗೆಗೆ ಪ್ರಾಶಸ್ತ್ಯ ನೀಡಿದರು. ಮಾನಸಿಕ ಗುಲಾಮಗಿರಿಯಲ್ಲಿದ್ದ ಕೋಟ್ಯಾಂತರ ದಲಿತರ ಕಷ್ಟಕಾರ್ಪಣ್ಯಗಳನ್ನು ನೀಗಿಸಲು ಹೋರಾಟ ಮಾಡಿದರು. ಡಾ.ಬಿ.ಆರ್. ಅಂಬೇಡ್ಕರ ಸಮತಾವಾದ, ಸಮಾಜವಾದದಂತಹ ಸಿದ್ಧಾಂತ ಪ್ರತಿಪಾದಿಸಿ, ಆ ಮೂಲಕ ದಲಿತರ ಉದ್ಧಾರವಾಗಬೇಕೆಂಬ ಭ್ರಮೆ ಇರಲಿಲ್ಲ. ಬದಲಾಗಿ ಸ್ವಯಂ ಬದುಕು ಉದ್ದಾರ ಮಾಡಿಕೊಳ್ಳಲು ದಲಿತರಿಗೆ, ಹಿಂದೂಳಿದವರಿಗೆ ಕರೆ ನೀಡಿದರು.

**ಪರಾಮರ್ಶನ ಗ್ರಂಥಗಳು**


- ಜವರಯ್ಯ ಮ.ನ. (1995). *ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ.* ಸಿದ್ಧಾರ್ಥ ಗ್ರಂಥಮಾಲೆ.
- ಕುಮಾರ ಕಕ್ಕಯ್ಯ ಪೋಳ್. (1997). *ಚಾತುರ್ವರ್ಣ ಧರ್ಮದರ್ಶನ : ಇಂಡಿಯಾ.* ಕರ್ನಾಟಕ ದಲಿತ ಕ್ರಿಯಾ ವೇದಿಕೆ, ಮೂಲನಿವಾಸಿಗಳ ಮಹಾಒಕ್ಕೂಟ.
- ಮಹೇಶ ಸಿ.ಕೆ. (2000). *ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ.* ವಿಮೋಚನಾ ಪ್ರಕಾಶನ.
- ಸಿದ್ಧಲಿಂಗಯ್ಯ (ಸಂ.) (2015). *ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ವಜ್ರಮಟ್ಟಿ ಪಿ.ವ್ಹಿ. (1993). *ಡಾ. ಅಂಬೇಡ್ಕರ್ (ಜೀವನ ಸಾಧನೆ ಮತ್ತು ವಿಚಾರ ವಿವೇಚನೆ).* ಮೇಘಮಿತ್ರ ಅರುಣೋದಯ.